# ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ, 2020–21

## ಮಾದರಿ ಪ್ರಶ್ನೆಪತ್ರಿಕೆ 1

ಸಮಯ: 3 ಗಂಟೆ | **ಪ್ರಥಮ ಭಾಷೆ ಕನ್ನಡ (01 K)** | ಅಂಕಗಳು : 100

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳು
   ಎ) 13  ಬಿ) 10  ಸಿ) 25  ಡಿ) 2
2. ಭೀಮನಂ– ಪದದಲ್ಲಿರುವ ವಿಭಕ್ತಿ
   ಎ) ಪ್ರಥಮ  ಬಿ) ದ್ವಿತೀಯ  ಸಿ) ಪಂಚಮಿ  ಡಿ) ಸಪ್ತಮಿ
3. ಮನ್ವಂತರ– ಪದವು ಈ ಸಂಧಿಗೆ ಉದಾಹರಣೆಯಾಗಿದೆ
   ಎ) ಆಗಮಸಂಧಿ  ಬಿ) ಯಣ್‌ಸಂಧಿ  ಸಿ) ಸವರ್ಣಧೀರ್ಘಸಂಧಿ  ಡಿ) ವೃದ್ಧಿಸಂಧಿ
4. ಕಾಗದ– ಈ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.
   ಎ) ಹಿಂದೂಸ್ಥಾನಿ  ಬಿ) ಉರ್ದು  ಸಿ) ಫಾರ್ಸಿ  ಡಿ) ಅರಬ್ಬೀ
5. ಬರೆದನು– ಪದದ ವಿಧ್ಯರ್ಥಕ ರೂಪ
   ಎ) ಬರೆಯಲಿ  ಬಿ) ಬರೆಯದು  ಸಿ) ಬರೆದಾನು  ಡಿ) ಬರೆಯನು
6. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂಥ ವಾಕ್ಯವನ್ನು ಹೀಗೆಂದು ಕರೆಯುವರು.
   ಎ) ಸಾಮಾನ್ಯವಾಕ್ಯ  ಬಿ) ಸಂಯೋಜಿತ ವಾಕ್ಯ  ಸಿ) ಮಿಶ್ರವಾಕ್ಯ  ಡಿ) ಭಾವಸೂಚಕವಾಕ್ಯ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿಸಿದ ಪದವನ್ನು ಬರೆಯಿರಿ:** **1 x 4 =4**

7. ದ್ಯೂತ : ಜೂಜು : : ದೃಷ್ಟಿ : __________
8. ಹಾಲ್ವೇನು : ಜೋಡುನುಡಿ : : ತುತ್ತತುದಿ : __________
9. ಬರೆದ : ಕೃದಂತನಾಮ : : ಅಂಜಿಕೆ : __________
10. ಕೃತ್ರಿಮ : ಮೋಸ : : ಅನೃತ : __________

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x 1 = 7**

11. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?
12. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
13. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?
14. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?
15. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು?
16. ದಿನಪಸುತ ಎಂದು ಯಾರನ್ನು ಕರೆಯುತ್ತಾರೆ?
17. ಚಿಕಾಗೋ ಸರ್ವಧರ್ಮ ಸಮ್ಮೇಳನ ಯಾವಾಗ ನಡೆಯಿತು?

**IV ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

18. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?
19. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?
20. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?
21. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

22. ಹಕ್ಕಿಯ ಹಾರಾಟವನ್ನು ಕವಿ ಬೇಂದ್ರೆಯವರು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?

23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

24. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?

25. ಪುಟ್ಟಪೋರಿಯ ಯಜಮಾನನ ಮನೆಯಲ್ಲಿ ಯಾವ ರೀತಿಯ ಸಂಭ್ರಮವಿದೆ?

26. ಭಗತ್‌ಸಿಂಗ್‌ನ ಸಹೋದರಿಗೆ ಆತನ ಉಪವಾಸದ ಕಾರಣಗಳು ಹೇಗೆ ತಿಳಿಯಿತು?

27. ಅಂಗಿ ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ಬರೆಯಿರಿ.

**V ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ಪು.ತಿ.ನ

29. ದ.ರಾ.ಬೇಂದ್ರೆ

**VI ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ನಿಮಗೆ ಪೊಡೆಮಟ್ಟು ಪೋಪೀ
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ

**VII ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 x 3 = 3**

31. ನೀಚರಿಗೆ ಮಾಡಿದ ಉಪಕಾರ ಹಾವಿಗೆ ಹಾಲೆರೆದಂತೆ

**VIII ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 x 3 = 3**

32. * ತಾಳಿದವನು ಬಾಳಿಯಾನು
* ಮನಸ್ಸಿದ್ದರೆ ಮಾರ್ಗ

**IX ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"

34. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"

35. "ಹುಸಿಯದ ಬೇಹಾರಿಯೇ ಇಲ್ಲ"

36. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"

37. "ಬಾಯ್ದಂಬುಲಕೆ ಕೈಯಾನುವರೆ"

38. "ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ"

**X ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4=4**

39. ಹಸುರಾಗಸ ________      ಹೊಸ ಹೂವಿನ ________

________      ________

________ **ಅಥವಾ** ________

________ ಬಿಸಿಲೂ !      ________ಯುಸಿರೂ

**XI ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

40. ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ । **1 x 4=4**
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು

**XII ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4=8**

41. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?

ಅಥವಾ

ರಾಹಿಲನು ಮುದುಕಿಯ ಕುಟುಂಬಕ್ಕೂ ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?

ಅಥವಾ

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**XIII ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

43. ಸತ್ಯೇಂದ್ರನಾಥ ಬೋಸ್‌ರವರು ಕಲ್ಕತ್ತಾದಲ್ಲಿ 1904ರಲ್ಲಿ ಜನಿಸಿದರು. ಇವರ ತಂದೆ ಸುರೇಂದ್ರನಾಥ ಬೋಸರು ರೇಲ್ವೆ ಉದ್ಯೋಗಿಯಾಗಿದ್ದರು. ತಾಯಿಯ ಹೆಸರು ಆಮೋದಿನಿ ದೇವಿ. ಕಲ್ಕತಾದಲ್ಲಿನ ಕಾಲೇಜು ವಿದ್ಯಾಭ್ಯಾಸದಲ್ಲಿ ಜಗದೀಶ ಚಂದ್ರ ಬೋಸರ ಶಿಷ್ಯರಾಗಿದ್ದರು. ಎಂ.ಎಸ್.ಸಿ. ಪದವಿಗಳಿಸಿ ಕಲ್ಕತ್ತ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾದರು. ಅನಂತರ ಢಾಕಾ ವಿಶ್ವವಿದ್ಯಾನಿಲಯದಲ್ಲಿ ರೀಡರ್ ಆದರು. ಢಾಕಾ ವಿಶ್ವವಿದ್ಯಾಲಯ ಸತ್ಯೇಂದ್ರನಾಥರಿಗೆ ಯೂರೋಪ್ ಪ್ರವಾಸದ ಏರ್ಪಾಡು ಮಾಡಿಕೊಟ್ಟಿತು. ಮೇಡಂ ಕ್ಯೂರಿಯವರ ಪ್ರಯೋಗಶಾಲೆಯಲ್ಲಿ ಸಂಶೋಧನೆ ನಡೆಸಿದರು. ಬರ್ಲಿನ್ ಹೋಗಿ ಆಲ್ಬರ್ಟ್ ಐನ್‌ಸ್ಟೈನ್‌ರೊಂದಿಗೆ ಕಾರ್ಯ ನಿರ್ವಹಿಸಿದರು. ಸತ್ಯೇಂದ್ರನಾಥರು ಮಿತ್ರರೊಂದಿಗೆ ಸೇರಿ ಅನಿಲಗಳ ಒತ್ತಡ, ಘನ ಅಳತೆ, ರೇಖಾಗಣಿತ ಪ್ರಮೇಯಗಳು ಕ್ವಾಂಟಂ ಸಂಖ್ಯಾಶಾಸ್ತ್ರ, ಅಣು, ಅನಿಲಗಳ ಬಗ್ಗೆ ಸಂಶೋಧನೆ ನಡೆಸಿದರು. ಭೂಗರ್ಭಶಾಸ್ತ್ರ, ಪ್ರಾಣಿಶಾಸ್ತ್ರಗಳಲ್ಲಿ ಸಹ ಆಸಕ್ತಿ ಹೊಂದಿದ್ದರು. 1950ರಲ್ಲಿ ಸತ್ಯೇಂದ್ರನಾಥರು ರಾಜ್ಯಸಭಾ ಸದಸ್ಯರಾದರು. 1964ರಲ್ಲಿ ದೆಹಲಿ ವಿಶ್ವವಿದ್ಯಾನಿಲಯ ಡಿ.ಎಸ್.ಸಿ. ಪದವಿ ನೀಡಿತು. ಅನೇಕ ಭಾಷೆಗಳನ್ನು ತಿಳಿದ ಸತ್ಯೇಂದ್ರನಾಥರು ಐನ್‌ಸ್ಟೀನ್‌ನ ಬಗ್ಗೆ ಗ್ರಂಥ ರಚಿಸಿದರು. 1974ರಲ್ಲಿ ಶ್ರೀ ಸತ್ಯೇಂದ್ರನಾಥ ಬೋಸರು ದಿವಂಗತರಾದರು.

**ಪ್ರಶ್ನೆಗಳು:**43 ಅ) ಸತ್ಯೇಂದ್ರನಾಥರ ಸಂಶೋಧನೆಗಳಾವುವು? ಅವರ ಆಸಕ್ತಿಯ ವಿಷಯಗಳಾವುವು?

43. ಆ) ಸತ್ಯೇಂದ್ರನಾಥರಿಗೆ ಢಾಕಾ ಪ್ರವಾಸದಿಂದ ಆದ ಪ್ರಯೋಜನಗಳೇನು?

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5 = 5**

44. ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಸುಜನಾ ಎಂದು ಭಾವಿಸಿಕೊಂಡು ಬೆಂಗಳೂರಿನ ವಸ್ತುಸಂಗ್ರಹಾಲಯದ ವ್ಯವಸ್ಥಾಪಕರಿಗೆ ಪ್ರವೇಶಾತಿಗೆ ಅನುಮತಿ ಕೋರಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ನವೀನ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಬೆಂಗಳೂರಿನ ಶಾಂತಿನಗರದಲ್ಲಿರುವ ನಿಮ್ಮ ತಂದೆ 'ಶಿವಪ್ಪ'ನವರಿಗೆ ಒಂದು ಪತ್ರ ಬರೆಯಿರಿ.

**XIV ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ: 1x5=5**

45. * ಸ್ವಚ್ಛ ಭಾರತ ಅಭಿಯಾನ

**ಅಥವಾ**

* ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ